Prajavani 14/02/2014 Pag no - 10

### 12ನೇ ಪಂಚವಾರ್ಷಿಕ ಯೋಜನೆ ಗುರಿ ಮುಟ್ಟುವ ವಿಶ್ವಾಸ

# 2017ಕ್ಕೆ 1.18 ಲಕ್ಷ ಮೆ.ವಾ ವಿದ್ಯುತ್

ನವದೆಹಲಿ(ಪಿಟಿಐ): ಪ್ರಸ್ತುತ ಕಲ್ಲಿದ್ದಲು ಮತ್ತು ಅನಿಲ ಸರಬರಾಜು ಪ್ರಕ್ರಿಯೆಯಲ್ಲಿ ಅಡೆತಡೆ ಎದುರಾಗಿದ್ದರೂ ಸಹ 2017ರ ಮಾರ್ಚ್ ವೇಳೆಗೆ ದೇಶದ ಒಟ್ಟು ವಿದ್ಯುತ್ ಉತ್ಪಾದನೆಗೆ ಹೊಸ ದಾಗಿ 1.18 ಲಕ್ಷ ಮೆಗಾವಾಟ್ ಒದಗಿ ಸುವ ಗುರಿ ಮುಟ್ಟಲಾಗುವುದು ಎಂದು ಕೇಂದ್ರ ಸರ್ಕಾರ ವಿಶ್ವಾಸ ವ್ಯಕ್ತಪಡಿಸಿದೆ.

2007; 12ರ ನಡುವಿನ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಹೊಸದಾಗಿ 78,577 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಇಟ್ಟುಕೊಂಡಿದ್ದರೂ ಇಂಧನ ಲಭ್ಯತೆ ಕೊರತೆಯಿಂದಾಗಿ ಸಾಧಿಸಲಾಗಿರಲಿಲ್ಲ. ಆದರೆ, ಈ ಬಾರಿ ಸದ್ಯ ಚಾಲ್ತಿಯಲ್ಲಿರುವ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ಹೆಚ್ಚುವರಿಯಾಗಿ 1.18 ಲಕ್ಷ ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಗುರಿ ಯನ್ನು ಖಂಡಿತಾ ಮುಟ್ಟಲಾಗುವುದು ಎಂದು ಕೇಂದ್ರ ವಿದ್ಯುತ್ ಇಲಾಖೆ ಕಾರ್ಯದರ್ಶಿ ಹೇಳಿದ್ದಾರೆ.

1.18 ಲಕ್ಷ ಮೆಗಾವಾಟ್ ಉತ್ಪಾ ದನೆ ಗುರಿಯಲ್ಲಿ ಕಳೆದ ಪಂಚವಾರ್ಷಿಕ ಯೋಜನೆಯಲ್ಲಿ ಕೊರತೆ ಬಿದ್ದ ವಿದ್ಯುತ್ ಸಹ ಸೇರಿದೆ. ಒಟ್ಟು ಗುರಿಯಲ್ಲಿ 30 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ನವೀಕರಿಸಬಹು ದಾದ ಇಂಧನ ಮೂಲಗಳಿಂದಲೇ ಬರಲಿದೆ ಎಂದು ಅವರು ಇಲ್ಲಿ ಗುರುವಾರ ಸುದ್ದಿಗಾರರಿಗೆ ವಿವರಿಸಿದರು.

ಐದು ವರ್ಷಗಳ ಗುರಿಯಾದ 1.18 ಲಕ್ಷ ಮೆಗಾ ವಾಟ್‌ನಲ್ಲಿ 2014ರ ಜನವರಿ ವೇಳೆಗೇ 30 ಸಾವಿರ ಮೆಗಾವಾಟ್ ಉತ್ಪಾದಿಸಲಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಮುಂದಿನ ಒಂದೂವರೆ ತಿಂಗಳಲ್ಲಿ 2000 ಮೆಗಾವಾಟ್ ಸೌರಶಕ್ತಿ ವಿದ್ಯುತ್ ಸೇರಿದಂತೆ ಹೊಸ ದಾಗಿ ಒಟ್ಟು 18,200 ಮೆಗಾವಾಟ್ ಉತ್ಪಾದನೆ ಆಗಲಿದೆ ಎಂದು ವಿವರ ನೀಡಿದರು.

ದೇಶೀಯವಾಗಿ ಸದ್ಯ ಕಲ್ಲಿದ್ದಲು ಪೂರೈಕೆಯಲ್ಲಿ ಸಮಸ್ಯೆಯಾಗಿದ್ದರೂ ಆಮದು ಮಾಡಿಕೊಂಡು ಕೊರತೆ ತುಂಬಿಕೊಳ್ಳಲಾಗುವುದು. ಹಾಗಾಗಿ ಶಾಖೋತ್ಪನ್ನ ವಿದ್ಯುತ್ ಮೂಲದ ಕೊಡುಗೆ ಕಡಿಮೆಯೇನೂ ಆಗು ವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆಮದು ಕಲ್ಲಿದ್ದಲು ವೆಚ್ಚ ಹೆಚ್ಚಿದರೆ ಅದರ ಹೊರೆ ಅನಿವಾರ್ಯವಾಗಿ ಬಳಕೆ ದಾರರಿಗೇ ವರ್ಗಾವಣೆ ಆಗಲಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಇದ್ದುದರಲ್ಲಿಯೇ ಸರ್ಕಾರಿ ಸ್ವಾಮ್ಯದ 'ಕೋಲ್ ಇಂಡಿಯ' ಕಂಪೆನಿ 2016; 17ರ ವೇಳೆಗೆ ಕಲ್ಲಿದ್ದಲು ಗಣಿ ಗಾರಿಕೆಯನ್ನು ವಾರ್ಷಿಕ 61.50 ಕೋಟಿ ಟನ್‌ಗ ಳಿಗೆ ಹೆಚ್ಚಿಸಲಿದೆ ಎಂಬ ನಿರೀಕ್ಷೆಯನ್ನೂ ಇಟ್ಟುಕೊಳ್ಳ ಲಾಗಿದೆ. ಇದು ಸಾಧ್ಯವಾದರೆ ಕಲ್ಲಿದ್ದಲು ಆಮದು ಹೊರೆ ತಪ್ಪಲಿದೆ.

---

Hosadigantha 14/2/14.

### 1892ರ ಒಪ್ಪಂದ ಮುಂದಿಟ್ಟು ನ್ಯಾಯಾಲಯಕ್ಕೆ ವಿಶೇಷ ಅರ್ಜಿ

# ಎತ್ತಿನಹೊಳೆಗೆ ತ.ನಾಡು ವಿಘ್ನ?

■ ನೆಲ್ಲಿಜೆ ನವ್ಯಜ್ಯೋತಿ

ಉಡುಪಿ: ರಾಜ್ಯದ ಬಯಲುಸೀಮೆಗೆ ನೀರುಣಿ ಸಬಹುದು ಎಂದು ನಂಬಲಾದ ಎತ್ತಿನ ಹೊಳೆ ಯೋಜನೆಗೆ ಫೆಬ್ರವರಿಯಲ್ಲೇ ಶಂಕುಸ್ಥಾಪನೆ ನಡೆಸ ಲಾಗುವುದು ಎಂದಿದ್ದರೂ, ಶಿಲಾನ್ಯಾಸಕ್ಕೂ ಮುನ್ನವೇ ಯೋಜನೆಗೆ ವಿಘ್ನ ಆಡರಿದೆಯೇ? ಹೀಗೊಂದು ಪ್ರಶ್ನೆ ಉದ್ಭವಿಸಿದೆ. ಬಹುಚರ್ಚಿತ ಎತ್ತಿನ ಹೊಳೆ ಯೋಜನೆಯಿಂದ ನೀರು ಒದಗಿಸುವ ಪ್ರದೇಶಗಳು 1892 ರ ಒಪ್ಪಂದಕ್ಕೆ ಒಳಪಟ್ಟಿದೆ.



ದಿಗಂತ ವಿಶೇಷ

ಇದೀಗ ಇದೇ ವಿಚಾರವನ್ನು ಪ್ರಶ್ನಿಸಿ ತಮಿಳು ನಾಡು ಸರಕಾರ ತಗಾದೆ ತೆಗೆದಿದೆಯೇ? ತಮಿಳು ನಾಡು 1892ರ ಹಳೇ ಒಪ್ಪಂದವನ್ನೇ ಮುಂದಿಟ್ಟು ಸುಪ್ರೀಂಕೋರ್ಟ್‌ಗೆ ವಿಶೇಷ ಅರ್ಜಿ ಸಲ್ಲಿಸಿದೆಯೇ? ಎಂಬುದು ಬಹುದೊಡ್ಡ ಪ್ರಶ್ನೆ. ಎತ್ತಿನಹೊಳೆ ಯೋಜನೆಯ ಮೂಲವಾಗಿರುವ ಹಾಸನದಲ್ಲಿ ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿದ ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡ, ಹೇಮಾವತಿಯಿಂದ ಅರಸೀಕೆರೆಗೆ ನೀರು ಕೊಂಡೊಯ್ಯುವ ಹಾಗೂ ಎತ್ತಿನಹೊಳೆ ಯೋಜನೆಗಳನ್ನು ಪ್ರಶ್ನಿಸಿ ತಮಿಳುನಾಡು ಸುಪ್ರೀಂ ಕೋರ್ಟ್ ಮುಂದೆ ವಿಶೇಷ ಅರ್ಜಿ ಸಲ್ಲಿಸಿದೆ.

ಇದು ರಾಜ್ಯದ ಅಡ್ವೊಕೇಟ್ ಜನರಲ್ ಅವರಿ ಗಾಗಲಿ, ಕಾನೂನು ಇಲಾಖೆಗಾಗಲಿ ಗೊತ್ತಿಲ್ಲವೇ? ಅವರು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿವೆ.

**ಏನಿದು 1892ರ ಒಪ್ಪಂದ ?**

ಮೈಸೂರು ಮತ್ತು ಮದ್ರಾಸ್ ಪ್ರಾಂತ್ಯಗಳ ನಡುವೆ ನೀರಾವರಿ ಯೋಜನೆಗಳ ವಿಚಾರವಾಗಿ 1892ರಲ್ಲಿ ಒಪ್ಪಂದವಾಯಿತು. ಅದರಂತೆ ಮೈಸೂರು ಸರ್ಕಾರ, ಮದ್ರಾಸ್ ಸರ್ಕಾರದ ಅನುಮತಿ ಇಲ್ಲದೆ ಹೊಸ ನೀರಾವರಿ ಯೋಜನೆಗಳನ್ನು ಹಮ್ಮಿಕೊಳ್ಳಬಾರದು, ಕಾವೇರಿ ಮತ್ತು ಅದರ ಸೂಚಿತ ಉಪನದಿಗಳು ಹಾಗೂ ತುಂಗಭದ್ರಾ ನದಿಯ ಸೂಚಿತ ಭಾಗಗಳಲ್ಲಿ ಯಾವುದೇ ಹೊಸ ನೀರಾವರಿ ಕಾಮಗಾರಿ ಹಾಗೂ ಜಲವಿದ್ಯುತ್ ಯೋಜನೆಗಳನ್ನು ಕೈಗೊಳ್ಳಬಾರದು. ತನ್ನ ನೀರಾವರಿ ಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸಬಾರದು ಎಂಬ ನಿರ್ಬಂಧ ಹೇರಲಾಯಿತು. ಒಪ್ಪಂದವು ನದಿ ಕೆಳಕಣಿವೆಯ ರಾಜ್ಯಕ್ಕೆ ಸಂಕಷ್ಟವಾದರೂ, ಆಗದಿದ್ದರೂ ತನ್ನ ಮೇಲ್ಭಾಗದ ರಾಜ್ಯಗಳ ಮೇಲೆ ನಿಷೇಧಾಧಿಕಾರ ಚಲಾಯಿಸುವ ಹಕ್ಕು ನೀಡಿದೆ.

---

Vijaya Karnataka 14/02/14

### ಗ್ರಾಹಕ ಮಿತ್ರನಿಗೆ ಸ್ವಾಗತ

ಜಿಲ್ಲೆಗೊಬ್ಬ ಗ್ರಾಹಕ ಮಿತ್ರನನ್ನು ನೇಮಕ ಮಾಡುವುದು ಸರಿಯಾದ ಆಲೋಚನೆ. ವಿದ್ಯುತ್ ವ್ಯತ್ಯಯ ಮತ್ತು ಅದರ ಕೊರತೆ ನೀಗಿಸಲು ಸರಕಾರ ಮಾಡಿರುವ ಈ ಯೋಜನೆ ಮೆಚ್ಚುಗೆಯಾಗಿದೆ. ಈ ರೀತಿ ಪ್ರತಿಯೊಂದು ಸಮಸ್ಯೆಗಳನ್ನು ನೇರವಾಗಿ ಮುಖ್ಯ ಅಧಿಕಾರಿಗಳಿಗೆ ತಿಳಿಸಲಾಗುವುದಿಲ್ಲ. ಅವರನ್ನು ಭೇಟಿಯಾಗಲೂ ಆಗುತ್ತಿರಲಿಲ್ಲ. ಹಿಗೇ ಪ್ರತಿ ಜಿಲ್ಲೆಗೆ ಒಬ್ಬ ಒಂಬಡ್ಸ್‌ಮನ್, ಕಾರ್ಯನಿರ್ವಾಹಕ ಅಧಿಕಾರಿ ನೇಮಕ ಮಾಡಿದರೆ ರೈತರು, ಪಟ್ಟಣ ವಾಸಿಗಳಿಗೂ ಅನುಕೂಲವಾಗುತ್ತದೆ. ಇದರಿಂದ ರೈತರಿಗೆ ತಮ್ಮ ತಮ್ಮ ಹೊಲ ಗಳಲ್ಲಿ ಒಂದೊಂದು ಟ್ರಾನ್ಸ್‌ಫಾರ್ಮರ್ ಹಾಕುವುದರಿಂದ ಯಾವುದೇ ಜಗಳ ತಂಟೆಗಳು ಬರುವುದಿಲ್ಲ. ಈಗಿರುವ ಸಮಸ್ಯೆ ದೂರವಗು ವುದು. ಇದರಿಂದ ರೈತನಿಗೆ ನೆಮ್ಮದಿ ಸಿಗುತ್ತದೆ. ಒಂಬಡ್ಸ್‌ಮನ್ ಬರುವುದರಿಂದ ವಿದ್ಯುತ್ ಕಳ್ಳರನ್ನು ತಪ್ಪಿಸಬಹುದು.

ಯಲಬುರ್ಗಾ — ಶರಣಪ್ಪ ಹಾಳಕೇರಿ (ಗೆದಗೇರಿ)